ವಿನಿಯೋಗ (ಸಂಖ್ಯೆ:2) ವಿಧೇಯಕ 2003ನ್ನು ಯಾವುದೇ ತಿದ್ದುಪಡಿಗಳಿಲ್ಲದೆ, ವಿಧಾನಪರಿಷತ್ತಿನಲ್ಲಿ ಅಂಗೀಕರಿಸಲಾಗಿದೆ" ಎಂದು ತಿಳಿಸಿರುತ್ತಾರೆ.

ಉಪಾಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ರಾಜ್ಯದ ಯೋಜನಾ ಗ್ರಾತದ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಸ್ಪಷ್ಟೀಕರಣ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಇವತ್ತು ಬಹಳವಾಗಿ ಈ ಹಣ ವಿನಿಯೋಗ ಪ್ರಸ್ತಾವನೆಯ ಬಗ್ಗೆ ವಿಚಾರ ಚರ್ಚೆಯಾಯಿತು. ಬೆಳಿಗ್ಗೆ ಸೋಮಶೇಖರ್‌ರವರು ಭಾಷಣವನ್ನು ಮಾಡುತ್ತಾ ನಾನು 2001–02ರ ನಮ್ಮ ಸ್ಟೇಟ್ ಪ್ಲಾನ್ ಔಟ್‌ಲೇಸ್ ವಿಚಾರದಲ್ಲಿ 98 ಪರ್ಸೆಂಟ್‌ನ್ನು ನಾವು ಇಂಪ್ಲಿಮೆಂಟ್ ಮಾಡಿದ್ದೇವೆ. ಅದರ ಹಿಂದಿನ ವರ್ಷದ ಬಗ್ಗೆ ತಾವು ಕೇಳಿದಿರಿ, 1999–2000ದಲ್ಲಿ ಬಜೆಟೆಡ್ ಎಸ್ಟಿಮೇಟ್ 5888 ಕೋಟಿ ರೂ.ಗಳು ಅನ್ಯೂಯಲ್ ಪ್ಲಾನ್ ಆದರೆ ಅಕ್ಯ್ಚುಯಲ್ ಎಕ್ಸ್‌ಪೆಂಡಿಚರ್ 6362 ಕೋಟಿ ರೂಪಾಯಿಗಳು; ಅದು 100 ಪರ್ಸೆಂಟ್ ಮೀರಿದೆ. ಹಾಗೆಯೇ 2000–2001ರಲ್ಲಿ 7274 ಕೋಟಿ ರೂಪಾಯಿಗಳು ಅನ್ಯುಯಲ್ ಪ್ಲಾನ್ ಆದರೆ ಆ್ಯಕ್ಚುಯಲ್ ಎಕ್ಸ್‌ಪೆಂಡಿಚರ್ 2353 ಕೋಟಿ ರೂಪಾಯಿಗಳು; ಅದು ಕೂಡ 100 ಪರ್ಸೆಂಟ್‌ಗಿಂತ ಮೇಲಕ್ಕೆ ಹೋಯಿತು. ನೀವು ಎಲ್ಲಿಂದ ಈ ಅಂಕಿ ಅಂಶಗಳನ್ನು ಸಂಗ್ರಹಿಸಿದ್ದೀರಿ ಎಂಬುದು ನನಗೆ ಅರ್ಥವಾಗಲಿಲ್ಲ. ನಿಮ್ಮ ಮೂಲ ಆ ಗುಟ್ಟನ್ನು ಬಿಟ್ಟುಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಬಿ. ಸೋಮಶೇಖರ್ : ಪ್ಲಾನಿಂಗ್ ಕಮೀಷನ್‌ಗೆ ಏನು ಕೊಟ್ಟಿದ್ದೀರಿ ಅದರ ಪ್ರಕಾರ ನಾವು ಮಾಡಿದ್ದೇವೆ.

Sri S.M. Krishna : These are figures which are born out by our records. 2001–02 ಇದರ ಬಗ್ಗೆ ಬೆಳಿಗ್ಗೆಯೇ ಹೇಳಿದೆ 8588–8347 ಕೋಟಿ ರೂಪಾಯಿಗಳು ಎಂದು ಆದ್ದರಿಂದ ಕರ್ನಾಟಕ ಒಂದು ಕನ್‌ಸಿಸ್ಟೆಂಟ್ ರೆಕಾರ್ಡ್‌ನ್ನು ಎಸ್ಟಾಬ್ಲಿಷ್ ಮಾಡಿದೆ. over a period of time ಏನು ಎಂದು ಹೇಳಿದರೆ annual plan ..... outlay ಗಳನ್ನು ಆದಷ್ಟು ನಾವು ಹೆಚ್ಚು ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳುತ್ತಿದ್ದೇವೆ. we have lived up to that reputation and we are trying to improve on that reputation.

(ಆ) ಬೈರೇಗೌಡರ ಅಂತ್ಯಕ್ರಿಯೆಯನ್ನು ಸರ್ಕಾರಿ ಮರ್ಯಾದೆಯೊಂದಿಗೆ ನಡೆಸುವ ಬಗ್ಗೆ

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಸೋಮಶೇಖರ್‌ರವರು ಹೇಳಿದ ಹಾಗೆ ಮಾನ್ಯ ಬೈರೇಗೌಡರ ಅವರ ಅಕಾಲಿಕ ನಿಧನದಿಂದಾಗಿ ನಾಳೆ ಅವರ ಅಂತ್ಯಕ್ರಿಯೆ ನಡೆಯುತ್ತಿದೆ, ಆ ಅಂತ್ಯಕ್ರಿಯೆಯಲ್ಲಿ ನಾವುಗಳೆಲ್ಲಾ ಭಾಗವಹಿಸುವುದಕ್ಕೆ ಹೋಗುತ್ತಿದ್ದೇವೆ. ಸಾರ್ವಜನಿಕ ಜೀವನದಲ್ಲಿ ಅವರ ಸ್ಥಾನಕ್ಕೆ ಅನುಸಾರವಾಗಿ ನಮ್ಮ ರಾಜ್ಯದ ಸಕಲ ಮರ್ಯಾದೆಗಳ ಜೊತೆಯಲ್ಲಿ ಅವರ ಅಂತ್ಯಕ್ರಿಯೆಯನ್ನು ಮಾಡುತ್ತೇವೆ.

ಉಪಾಧ್ಯಕ್ಷರು : ಸದನವನ್ನು ನಾಳೆ ಮಧ್ಯಾಹ್ನ 3–00 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ರಾತ್ರಿ 8 ಗಂಟೆ 19 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ
ದಿನಾಂಕ : 31ನೇ ಜುಲೈ 2003ರ ಗುರುವಾರ
ಮಧ್ಯಾಹ್ನ 3–00 ಗಂಟೆಗೆ ಸೇರಲು ನಿಶ್ಚಯಿಸಿತು)

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)